ಜಯನಗರ ಬಸ್ ನಿಲ್ದಾಣದಲ್ಲಿ ಕ.ರಾ.ರ.ಸಾ.ಸಂ. ಸ್ಥಳ ಕಾದಿರಿಸುವಿಕೆ ಕೌಂಟರ್

134 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಬಸ್ ನಿಲ್ದಾಣದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಿಗೆ ಮುಂಗಡ ಸ್ಥಳ ಕಾದಿರಿಸುವಿಕೆಯ ಕೌಂಟರ್ ಯಾವಾಗ ಪ್ರಾರಂಭಿಸಲಾಯಿತು?

ಆ) ಈ ಕೌಂಟರನ್ನು ಈಗ ಮುಚ್ಚಲಾಗಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಇದರಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗಿಲ್ಲವೇ?

ಉ) ಮೇಲ್ಕಂಡ ಕೌಂಟರನ್ನು ಕೂಡಲೇ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ದಿನಾಂಕ : 01-08-1990ರಂದು.

ಆ) ಹೌದು.

ಇ) ಹಾರ್ಡ್‌ವೇರ್ ಮತ್ತು ಹೆಚ್ಚುವರಿ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಆಧುನೀಕರಣಕ್ಕಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಈ) ತಾತ್ಕಾಲಿಕವಾಗಿ ಸಾರ್ವಜನಿಕರು ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಉ) ಹೌದು.

ಶ್ರೀ ರಾಮಲಿಂಗ ರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಜಯನಗರ ಕಾಂಪ್ಲೆಕ್ಸ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲಿ ಎಂದು, ಅದರಲ್ಲೂ ಬೆಂಗಳೂರು ದಕ್ಷಿಣ ಭಾಗ, ಜಯನಗರ, ಜೆ.ಪಿ.ನಗರ, ಬಸವನಗುಡಿ, ಬನಶಂಕರಿ, ಕೋರಮಂಗಲದಲ್ಲಿ ಇರುವಂತವರಿಗೆ ಅನುಕೂಲವಾಗಲಿ ಎಂದು 1990ರಲ್ಲಿ ಒಂದು ಅಡ್ವಾನ್ಸ್ ಬುಕ್ಕಿಂಗ್ ಕೌಂಟರ್ ಪ್ರಾರಂಭ ಮಾಡಿದಿರಿ. ನಂತರ ಅದನ್ನು ಕಂಪ್ಯೂಟರೈಸ್ ಮಾಡಿದಿರಿ. ಆದರೆ ಈಗ ಅದನ್ನು ನಿಲ್ಲಿಸಿದ್ದೀರಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಆಧುನೀಕರಣಗೊಳಿಸುವುದಕ್ಕಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಹೇಳುವಿರಿ. ಆದರೆ ಇದನ್ನು ಪುನಃ ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೆಂಗಳೂರಿನಲ್ಲಿ ಇರುವಂತಹ ದೊಮ್ಮಲೂರು, ಜಯನಗರ, ಬಸ್‌ಸ್ಯಾಂಡ್, ಲೆಜಿಸ್ಲೇಟರ್ ಹೋಂ ಮತ್ತು ಬಿಬಿಎಸ್ ಈ ನಾಲ್ಕು ಕಡೆಗಳಲ್ಲಿಯೂ 1990 ರಿಂದ ಕಂಪ್ಯೂಟರೀಕರಣ ಕೆಲಸ ಪ್ರಾರಂಭವಾಗಿತ್ತು. ಆದರೆ ದಿನಾಂಕ 3.1.1998ರಿಂದ ಇದನ್ನು ಮುಚ್ಚಲಾಗಿದೆ. ಅಂದರೆ ಜಯನಗರ ಒಂದೇ ಅಲ್ಲ, ನಾಲ್ಕು ಕಡೆಗಳಲ್ಲಿಯೂ ಕಂಪ್ಯೂಟರೈಸ್ ರಿಸರ್ವೇಷನನ್ನು ನಾವು

ನಿಲ್ಲಿಸುದ್ದೇವೆ. ಏಪ್ರಿಲ್ 15ನೇ ತಾರೀಖಿನಿಂದ ಪುನಃ ಇದನ್ನು ಪ್ರಾರಂಭ ಮಾಡುತ್ತಿದ್ದೇವೆ. ಇದನ್ನು ಯಾವ ಕಾರಣಕ್ಕೋಸ್ಕರ ಮುಚ್ಚಿದ್ದೇವೆ ಎಂದರೆ, ಆಗ ಉಪಯೋಗಿಸುವಂತಹ ಕಂಪ್ಯೂಟರ್ ಸಾಫ್ಟ್‌ವೇರ್ ಏನಿತ್ತು ಅದು ಈಗ ಬಹಳ ಹಳೆಯದಾಗಿದೆ, ಆದಕಾರಣ ಅದನ್ನು ಹೊಸದಾಗಿ ಮಾಡಬೇಕಾಗಿದೆ, ಮತ್ತು ಈ ಜಾಲವನ್ನು ಇಡೀ ಬೆಂಗಳೂರು ಅಷ್ಟೇ ಅಲ್ಲ, ಹುಬ್ಬಳ್ಳಿಯಲ್ಲಿ, ಮೈಸೂರಿನಲ್ಲಿ ಮತ್ತು ಇತರೇ ಕಡೆಗಳಲ್ಲಿಯೂ ಸಹಿತ ಕಂಪ್ಯೂಟರ್ ಮೂಲಕವಾಗಿ ರಿಸರ್ವೇಷನ್ ಮಾಡಬೇಕು ಎನ್ನುವ ಉದ್ದೇಶದಿಂದಾಗಿ ನಮ್ಮ ಡಿಪೋಗಳಿಗೆ, ಡಿವಿಷನ್‌ಗಳಿಗೆ ಮತ್ತು ರಿಸರ್ವೇಷನ್ ಕೌಂಟರ್‌ಗಳಿಗೆ ಸ್ಯಾಟಲೈಟ್ ಮೂಲಕ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮುಚ್ಚಿದ್ದೇವೆಯೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ನಾವು ಪುನಃ ಇದನ್ನು ಏಪ್ರಿಲ್ 15 ರಿಂದ ಪ್ರಾರಂಭ ಮಾಡುತ್ತೇವೆ.

ಕುಣಿಗಲ್ ಪಟ್ಟಣದ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳು

135 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳೆಷ್ಟು?

ಆ) ಈ ಪ್ರದೇಶಗಳ ಅಭಿವೃದ್ಧಿಗಾಗಿ, ವಸತಿ ಸೌಕರ್ಯವೂ ಸೇರಿದಂತೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಮಂಡಳಿಯು ಕುಣಿಗಲ್ ಪಟ್ಟಣದಲ್ಲಿ ಇದುವರೆಗೂ 7 ಕೊಳಚೆ ಪ್ರದೇಶಗಳನ್ನು ಗುರುತಿಸಿದೆ.

ಆ) ಕುಣಿಗಲ್ ಪಟ್ಟಣದಲ್ಲಿ ಗುರುತಿಸಿರುವ 7 ಕೊಳಚೆ ಪ್ರದೇಶಗಳ ಪೈಕಿ 4 ಕೊಳಚೆ ಪ್ರದೇಶಗಳು ಕಾಯಿದೆ ಪ್ರಕಾರ ಘೋಷಿತವಾಗಿದ್ದು, 3 ಕೊಳಚೆ ಪ್ರದೇಶಗಳಲ್ಲಿ ಈಗಾಗಲೇ 9.24 ಲಕ್ಷ ರೂ.ಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಆದರೆ ವಸತಿ ಯೋಜನೆಯನ್ನು ಇಲ್ಲಿ ತೆಗೆದುಕೊಂಡಿರುವುದಿಲ್ಲ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ಕೊಳಚೆ ಪ್ರದೇಶದ ಹೆಸರು	ಖರ್ಚಾದ ಹಣ	ಒದಗಿಸಿರುವ ಸೌಲಭ್ಯಗಳ ವಿವರ
1)	ಕೋಟೆ ಏರಿಯಾ ಕೊಳಚೆ ಪ್ರದೇಶ	1.61	ರಸ್ತೆ, ಚರಂಡಿ, ನೆಲಹಾಸು ಮತ್ತು ಬೀದಿ ದೀಪ
	ಇದೇ ಕೊಳಚೆ ಪ್ರದೇಶಕ್ಕೆ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ	4.85	ಕಲ್ಲು ಚಪ್ಪಡಿ, ರಸ್ತೆ ಮಳೆನೀರಿನ ಚರಂಡಿ, ಕಿರುನೀರು ಸರಬರಾಜು